**ರಾಜ್ಯದಲ್ಲಿ ಆಶ್ರಯ ಮತ್ತು ಇಂದಿರಾ ಆವಾಸ್ ಮನೆಗಳು**

**119 (503) ಶ್ರೀ ದಿನಕರ ಕೇಶವ ಶೆಟ್ಟಿ. (ಕುಮಟ) :** ಮಾನ್ಯ ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಆಶ್ರಯ ಮತ್ತು ಇಂದಿರಾ ಆವಾಸ್ ಮನೆಗಳನ್ನು ಪಡೆಯಲು ಸರ್ಕಾರ ರೂಪಿಸಿರುವ ನಿಯಮಗಳೇನು (ನಿಯಮಗಳ ಪ್ರತಿಯನ್ನು ನೀಡುವುದು);

ಆ) ರಾಜ್ಯದಲ್ಲಿ ಆಶ್ರಯ ಮತ್ತು ಇಂದಿರಾ ಆವಾಸ್ ಮನೆಗಳನ್ನು ಪಡೆಯಲು ಅವರ ಹೆಸರಿನಲ್ಲಿಯೇ ಜಮೀನು ಇರಬೇಕೆಂಬ ನಿರ್ಬಂಧವನ್ನು ಸರ್ಕಾರ ವಿಧಿಸಿದೆಯೇ;

ಇ) ಹಾಗಿದ್ದಲ್ಲಿ ಇದಕ್ಕೆ ಕಾರಣಗಳೇನು;

ಈ) ಈ ಹಿಂದೆ ಬಾಂಡ್‌ಗಳನ್ನು ನೀಡಿ ಮನೆಗಳನ್ನು ಪಡೆಯುತ್ತಿದ್ದ ಪದ್ದತಿಯನ್ನೆ ಪುನಃ ಜಾರಿಗೆ ತರಲಾಗುವುದೇ;

ಉ) ಹಾಗಿಲ್ಲದಿದ್ದಲ್ಲಿ, ಜಾರಿಗೆ ತರಲು ಸರ್ಕಾರಕ್ಕಿರುವ ತೊಂದರೆಗಳೇನು?

**ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ವಸತಿ, ವಾರ್ತಾ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ವಿಜ್ಞಾನ ಮತ್ತು ತಂತ್ರಜ್ಞಾನ ಹಾಗೂ ಬೆಂಗಳೂರು ಜಲಮಂಡಳಿ ಸಚಿವರು) :**

**ಅ) ಆಶ್ರಯ ಯೋಜನೆಗೆ ಸಂಬಂಧಿಸಿದಂತೆ :**

ವಸತಿ ಯೋಜನೆಯಡಿ ಮನೆಯನ್ನು ಪಡೆಯಲು ಫಲನುಭವಿಯು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು.

1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು.
2. ನಿವೇಶನರಹಿತ/ವಸತಿರಹಿತರ ಪಟ್ಟಿಯಲ್ಲಿ ಸೇರಿಸಬೇಕು.
3. ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು (ಪ್ರಸ್ತುತ ಮಿತಿಯು ವಾರ್ಷಿಕ ರೂ. 11800/– ಆಗಿರುತ್ತದೆ.)

4. ಮನೆ/ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ ಹೊಂದಿರಬೇಕು.
5. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.

**ಇಂದಿರಾ ಆವಾಸ್ ಯೋಜನೆಗೆ ಸಂಬಂಧಿಸಿದಂತೆ:**

ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಮನೆಯನ್ನು ಪಡೆಯಲು ಫಲಾನುಭವಿಯು ಈ ಕೆಳಗಿನ ಅರ್ಹತೆಗಳನ್ನು ಹೊಂದಿರಬೇಕು.

1. ಕರ್ನಾಟಕ ರಾಜ್ಯದ ನಿವಾಸಿಯಾಗಿರಬೇಕು,
2. ಸರ್ವ ಕುಟುಂಬ ಸಮೀಕ್ಷೆಯಡಿಯಲ್ಲಿ 30 ಅಥವಾ ಅದಕ್ಕಿಂತ ಕಡಿಮೆ ಅಂಕ ಹೊಂದಿರಬೇಕು.
3. ಆರ್ಥಿಕವಾಗಿ ಹಿಂದುಳಿದಿದ್ದು, ವಾರ್ಷಿಕ ಆದಾಯವು ಬಡತನ ರೇಖೆಗಿಂತ ಕೆಳಗಿರುವವರಿಗೆ ನಿಗದಿಪಡಿಸಿರುವ ಮಿತಿಗಿಂತ ಕಡಿಮೆ ಇರಬೇಕು (ಪ್ರಸ್ತುತ/ ಮಿತಿಯು ವಾರ್ಷಿಕ ರೂ. 32000/– ಆಗಿರುತ್ತದೆ.)
4. ಮನೆ/ನಿವೇಶನಕ್ಕೆ ಸಂಬಂಧಿಸಿದಂತೆ ಹಕ್ಕುಪತ್ರ ಹೊಂದಿರಬೇಕು.
5. ಬೇರೆ ಯಾವುದೇ ಯೋಜನೆ/ಇಲಾಖೆಯಿಂದ ಈಗಾಗಲೇ ವಸತಿ ಸೌಲಭ್ಯ ಪಡೆದಿರಬಾರದು.

ಆ) ಹೌದು.

ಇ) ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮದಿಂದ ಅನುಷ್ಠಾನ ವಾಗುತ್ತಿರುವ ಯೋಜನೆಗಳಿಗೆ ಸಂಬಂಧಿಸಿದಂತೆ ಬಡ ಫಲಾನುಭವಿಗಳಿಗಾಗಿ ಬಿಡುಗಡೆಯಾದ ಅನುದಾನವನ್ನು ದುರುಪಯೋಗವಾಗದಂತೆ ತಡೆಗಟ್ಟಲು ಹಾಗೂ ಗ್ರಾಮೀಣ ಆಶ್ರಯ ಯೋಜನೆಯಡಿಯಲ್ಲಿ ಪ್ರತಿಶತ 50 ರಷ್ಟು ಹಾಗೂ ನಗರ ಆಶ್ರಯ ಯೋಜನೆಯಡಿಯಲ್ಲಿ ಸಂಪೂರ್ಣ ಅನುದಾನ ಸಾಲದ ರೂಪದಲ್ಲಿ ನೀಡುತ್ತಿರುವುದರಿಂದ ವಸತಿ ಯೋಜನೆಯಡಿಯಲ್ಲಿ ಫಲಾನುಭವಿಗಳನ್ನು ಆಯ್ಕೆ ಮಾಡಿದ ಕೂಡಲೇ ದಾಖಲೀಕರಣ ಮಾಡಲಾಗುತ್ತಿದೆ. ಇದರಲ್ಲಿ ಉಪನೋಂದಣಿ ಕಛೇರಿಯಲ್ಲಿ ನಮೂನೆ–3/3ಎರಲ್ಲಿ ನಿವೇಶನದೊಂದಿಗೆ ಮನೆಯನ್ನು ಅಡಮಾನ ನೋಂದಣಿ

ಮಾಡಿಸುವುದು ಪ್ರಮುಖವಾಗಿರುತ್ತದೆ. ನಿವೇಶನ ಫಲಾನು ಭವಿಯ ಹೆಸರಿನಲ್ಲಿ ಇಲ್ಲವಾದಲ್ಲಿ ಉಪನೋಂದಣಿ ಕಛೇರಿಯಲ್ಲಿ ನೋಂದಣಿ ಮಾಡಿಸಲು ಸಾಧ್ಯವಾಗುವುದಿಲ್ಲವಾದ್ದರಿಂದ ಆಶ್ರಯ ಮತ್ತು ಇಂದಿರಾ ಆವಾಸ್ ಯೋಜನೆಯಡಿಯಲ್ಲಿ ಫಲಾನುಭವಿಗಳು ಕಡ್ಡಾಯವಾಗಿ ನಿವೇಶನ ಹೊಂದಿರಬೇಕೆಂದು ನಿರ್ಬಂಧಿಸಿದೆ.

ಈ) ಇಲ್ಲ.

ಉ) ಅರ್ಹ ಫಲಾನುಭವಿಗಳಿಗೆ ವಸತಿ ಸೌಕರ್ಯ ಕಲ್ಪಿಸಲು ಹಾಗೂ ದುರುಪಯೋಗವನ್ನು ತಡೆಗಟ್ಟುವ ಸಲುವಾಗಿ ದಾಖಲೀಕರಣ ಪ್ರಕ್ರಿಯೆಯನ್ನು ಜಾರಿಗೆ ತರಲಾಗಿರುತ್ತದೆ. ಆದ್ದರಿಂದ ಈ ಹಿಂದೆ ಬಾಂಡ್ ಗಳನ್ನು ನೀಡಿ ಮನೆಗಳನ್ನು ಪಡೆಯುವ ಪದ್ದತಿಯನ್ನು ಪುನಃ ಜಾರಿಗೆ ತರುವ ಪ್ರಶ್ನೆ ಉದ್ಭವಿಸುವುದಿಲ್ಲ.

## ರಾಜ್ಯದಲ್ಲಿ ವಿದ್ಯುತ್ ಖರೀದಿ

**120 (504) ಶ್ರೀ ದಿನಕರ ಕೇಶವ ಶೆಟ್ಟಿ (ಕುಮಟಿ) :** ಮಾನ್ಯ ಮುಖ್ಯಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದ ಬೆಂಗಳೂರು ವಿದ್ಯುತ್ ಕಂಪನಿ, ಮಂಗಳೂರು ವಿದ್ಯುತ್ ಕಂಪನಿ, ಗುಲ್ಬರ್ಗಾ ವಿದ್ಯುತ್ ಕಂಪನಿ, ಚಾಮುಂಡಿ ವಿದ್ಯುತ್ ಕಂಪನಿ ಹಾಗೂ ಹುಬ್ಬಳ್ಳಿ ವಿದ್ಯುತ್ ಕಂಪನಿಗಳು ಕಳೆದ 2007–08, 2008–09 ಹಾಗೂ 2009–10ರವರೆಗೆ ದುಬಾರಿ ವಿದ್ಯುತ್‌ನ್ನು ಖರೀದಿ ಮಾಡಲು ಖರ್ಚು ಮಾಡಿರುವ ಹಣವೆಷ್ಟು ಹಾಗೂ ಎಷ್ಟು ಯೂನಿಟ್ ವಿದ್ಯುತ್‌ನ್ನು ಖರೀದಿ ಮಾಡಲಾಗಿರುತ್ತದೆ;

ಆ) ವಿದ್ಯುತ್‌ನ್ನು ಯಾವ ಯಾವ ಮೂಲಗಳಿಂದ ಹಾಗೂ ಯಾವ ಯಾವ ಖಾಸಗಿ ಸಂಸ್ಥೆಗಳಿಂದ ಪ್ರತಿ ಯೂನಿಟ್‌ಗೆ ಯಾವ ಯಾವ ದರದಲ್ಲಿ ಖರೀದಿ ಮಾಡಲಾಗಿರುತ್ತದೆ (ಆ ಕಂಪನಿಗಳ ಹೆಸರು ವಿಳಾಸದ ಪೂರ್ಣ ಮಾಹಿತಿ ನೀಡುವುದು);

ಇ) ರಾಜ್ಯದ ಈ ವಿದ್ಯುತ್ ಕಂಪನಿಗಳು ಕಳೆದ 2007–08, 2008–09 ಹಾಗೂ 2009–10 ರವರೆಗೆ ದುಬಾರಿ ವಿದ್ಯುತ್‌ನ್ನು ಖರೀದಿ ಮಾಡಲು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅನುಮತಿ ಪಡೆಯಲಾಗಿದೆಯೇ;

ಈ) ಅನುಮತಿ ಪಡೆಯದಿದ್ದಲ್ಲಿ ಕಾರಣಗಳೇನು;